**ಓ.ಎಸ್. ನಂ. 312/2012 ಡಿ.ಡಬ್ಲೂ-1 ಹೆಸರು - ಮನ್ನೇಗೌಡ**

**ಸಾಕ್ಷಿಯನ್ನು ದಿನಾಂಕಃ 03/03/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ.ಎಲ್.ಬಿ. ವಾದಿ ಪರ ವಕೀಲರಿಂದಃ-**

ನನ್ನ ತಂದೆ ಸರ್ವೆ ನಂಬರ್ 289/1 ಮತ್ತು 289/2 ರ ಜಮೀನನ್ನು ತುಂಡು ಮಾಡಿ ಮಾರಾಟ ಮಾಡಿರುವ ಕ್ರಯ ಪತ್ರಗಳ ಚೆಕ್ಕುಬಂಧಿಯೊಳಗಡೆ ಖರೀದಿದಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬೋಳೀ ಮರಿಗೌಡನ ಮಗ ಮರಿಗೌಡ ಎಂದರೆ ನನ್ನ ಅಣ್ಣ. ನನ್ನ ಅಣ್ಣ ಮರೀಗೌಡ 18.06.1980 ರಲ್ಲಿ ಕುನ್ನೇಗೌಡರ ಮಗಳಾದ ಕೆಂಪಮ್ಮನಿಗೆ ಸರ್ವೆ ನಂಬರ್ 289/2 ರಲ್ಲಿನ 5 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಕೆಂಪಮ್ಮ ತಾನು ಖರೀದಿಸಿದ 5 ಗುಂಟೆ ಜಮೀನಿನ ಮಾಲೀಕರಾಗಿ ಅದರ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಮನೆ ಕಟ್ಟಿಕೊಂಡು ಅಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ಕೆಂಪಮ್ಮರವರ ಕ್ರಯ ಪತ್ರದ ಚೆಕ್ಕುಬಂಧಿಯೊಳಗಿನ ಸ್ವತ್ತಿನಲ್ಲಿ ಕೆಂಪಮ್ಮ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿನ ಚೆಕ್ಕುಬಂಧಿಯೊಳಗಿನ 5 ಗುಂಟೆಯನ್ನು ಕೆಂಪಮ್ಮನವರು ವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮನೆ ಕಟ್ಟಿರುವ ಚೆಕ್ಕು ಬಂಧಿ ಮತ್ತು ಕೆಂಪಮ್ಮನ ಕ್ರಯ ಪತ್ರದ ಚೆಕ್ಕುಬಂಧಿ ಬೇರೆ ಬೇರೆ ಎಂದರೆ ಸರಿ. ನಾನು ಕೆಂಪಮ್ಮ ಮತ್ತು ವಾದಿದಯ ಗಂಡ ಖರೀದಿಸಿರುವ ಜಮೀನಿನ ಚೆಕ್ಕುಬಂಧಿಯೊಳಗಡೆ ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಮರಿಗೌಡ ಮಾರಾಟ ಮಾಡಿದ ಸ್ವತ್ತುಗಳಿಗೆ ಮತ್ತು ಸ್ವತ್ತಿನ ಪಹಣಿಗೂ ಪರಸ್ಪರ ತಾಳೆಯಾಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದಲ್ಲಿ ನಮೂದಿಸಿರುವ ಸರ್ವೆ ನಂಬರ್ ನ ಪೋಡುಗಳಿಗೂ ಮತ್ತು ಕ್ರಯ ಪತ್ರದಲ್ಲಿನ ಚೆಕ್ಕುಬಂಧಿಯ ಜಮೀನಿನ ಸರ್ವೆ ನಂಬರ್ ನ ಪೋಡುಗಳು ಬೇರೆ ಬೇರೆಯಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಕೆಲವೊಂದಷ್ಟು ಖರೀದಿದಾರರು ಸರ್ವೆ ನಂಬರ್ ನಲ್ಲಿನ ವ್ಯತ್ಯಾಸವನ್ನು ಸರಿ ಪಡಿಸಿಕೊಂಡಿದ್ದಾರೆ ಮತ್ತು ಇನ್ನು ಕೆಲವೊಂದಷ್ಟು ಮಂದಿ ಸರ್ವೆ ನಂಬರ್ ನ ವ್ಯತ್ಯಾಸವನ್ನು ಸರಿ ಪಡಿಸಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಕೆಂಪಮ್ಮ ನ ಕ್ರಯ ಪತ್ರದಲ್ಲಿ ಮತ್ತು ನಂತರ ಕೆಂಪಮ್ಮನಿಂದ ವಾದಿಯ ಗಂಡ ಜಮೀನನ್ನು ಖರೀದಿಸಿದಾಗ ಅವರ ಕ್ರಯ ಪತ್ರದಲ್ಲಿಯೂ ಕೂಡ ಸರ್ವೆ ನಂಬರ್ ನ ಪೋಡು ಬದಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಸರ್ವೆ ನಂಬರ್ ನ ಪೋಡು ಬದಲಾಗಿರುವ ವಿಚಾರ ವಾದಿ ಮತ್ತು ಆಕೆಯ ಗಂಡ ಮತ್ತು ಅವರ ಕ್ರಯದಾರರಾದ ಕೆಂಪಮ್ಮನವರಿಗೂ ಕೂಡ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ನಿಯೋಗಿ ಸ್ಥಳಕ್ಕೆ ಸ್ಥಳ ಪರಿಶೀಲನೆಗಾಗಿ ಬಂದಾಗಲೇ ಸರ್ವೆ ನಂಬರ್ ನ ಪೋಡ್ ನಲ್ಲಿ ಆಗಿರುವ ಬದಲಾವಣೆ ಮೊದಲ ಬಾರಿ ಅವರ ಗಮನಕ್ಕೆ ಬಂತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ಹಿಂದೆಯೇ 2 ಬಾರಿ ಜಮೀನಿನ ಅಳತೆ ಆಗಿದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಈ ಹಿಂದೆ 2 ಬಾರಿ ಅಳತೆ ಆಗಿಲ್ಲ ಮತ್ತು ದಾವಾ ಚೆಕ್ಕುಬಂಧಿಯೊಳಗೆ ನಾನು ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮ

ಕ್ರಯಕ್ಕೆ ಪಡೆದ ಚೆಕ್ಕುಬಂಧಿಯೊಳಗೆ ಕೆಂಪಮ್ಮ ಸ್ವಾಧೀನದಲ್ಲಿ ಇದ್ದರು, ನಂತರ ವಾದಿಯ ಗಂಡ ಕ್ರಯಕ್ಕೆ ಪಡೆದ ಚೆಕ್ಕುಬಂಧಿಯೊಳಗೆ ಅವರು ಸ್ವಾಧೀನದಲ್ಲಿ ಇದ್ದರು ಮತ್ತು ವಾದಿಯ ಗಂಡನ ಮರಣಾನಂತರ ಸದರಿ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯ ಗಂಡನ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಯೊಳಗಿನ ಸ್ವತ್ತಿಗೆ ವಾದಿಯ ಗಂಡನ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸರಿ. ವಾದಿಯ ಗಂಡನ ಹೆಸರಿನಲ್ಲಿ ಬರುತ್ತಿರುವ ಪಹಣಿಗೂ ಮತ್ತು ದಾವಾ ಷೆಡ್ಯೂಲ್ ಗೂ ತಾಳೆ ಯಾಗುತ್ತಿಲ್ಲ ಎಂದರೆ ಸಾಕ್ಷಿಯು ಅವರು ಖರೀದಿಸಿರುವ ಜಮೀನನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಈ ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ 2 ಬೆಲ್ಜಾರ್ ಮರ ಮತ್ತು 1 ಬಾಗೇ ಮರ ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಮರಗಳು ನನ್ನ ಸರ್ವೆ ನಂಬರ್ 289/1 ರಲ್ಲಿ ಇತ್ತು ಅವುಗಳನ್ನು ನಾನು ಮನೆ ಕಟ್ಟಿಸುವಾಗ ಕತ್ತರಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮರಗಳು ದಾವಾ ಚೆಕ್ಕುಬಂಧಿಯೊಳಗಡೆ ಇತ್ತು ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**